ಅರ್ಥವಾಗುತ್ತದೆ. ನಿಜವಾಗಿ ಈ ಬಾರ್ ಮತ್ತು ವೈನ್‌ಶಾಪ್‌ಗಳ ಮೂಲಕ ನಮ್ಮ ಹುಡುಗರು ಬಹಳಷ್ಟು ಹಾಳಾಗುತ್ತಾರೆಯೇ ವಿನಃ ಒಳ್ಳೆಯದಾಗಿಲ್ಲ. ಅವರಿಗೆ ನಾವು ಕೊಟ್ಟ ಫಿಗರ್ಸ್ ಸರಿಯಾಗಿಲ್ಲ ಎಂದು ಕಂಡರೂ ನಾವು ಕೊಟ್ಟಿದ್ದು ಸರಿಯಾಗಿಯೇ ಇದೆ. ಹಾಸನದಲ್ಲಿ ಎರಡು ಮುಖ್ಯ ರಸ್ತೆಗಳು ಇವೆ, ಅಲ್ಲಿ ನಾವು ಬಹಳಷ್ಟು ಬಾರ್‌ಗಳನ್ನು ನೋಡುತ್ತೇವೆ. ಒಂದು ಪಟ್ಟಣದಲ್ಲಿ 7500 ಜನಸಂಖ್ಯೆ ಇದ್ದರೆ ಒಂದು ಸಿ-ಎಲ್: 2 ಕೊಡುತ್ತಾರೆ. ಹಳ್ಳಿಗಳಲ್ಲಿ 15 ಸಾವಿರ ಜನಸಂಖ್ಯೆ ಇದ್ದರೆ ಒಂದು ಸಿ.ಎಲ್-2 ಕೊಡುತ್ತಾರೆ. ಅದಕ್ಕಿಂತ ಹೆಚ್ಚು ಕೊಡಲು ಕಾನೂನು ಪ್ರಕಾರವೇ ಆಗುವುದಿಲ್ಲ. ಆದರೆ 50 ಪರ್‌ಸೆಂಟ್ ಒಂದು ಡಿಸ್ಕ್ರಿಪ್ಷನರಿಯಲ್ಲಿ ಕೊಡಬಹುದೆಂದು ಕಾನೂನಿನಲ್ಲಿದೆ. ಆದ್ದರಿಂದ ನಾವು ಕೊಟ್ಟ ಫಿಗರ್ಸ್ ಸರಿಯಾಗಿದೆ. ಅದೇ ಪ್ರಕಾರ ನಾನು ಹೇಳಿದ ಹಾಗೆ ಎರಡು ಬಾರ್‌ಗಳಿಗೆ ಮತ್ತು 10 ಸಿಎಲ್: 2 ರೀಟೈಲ್ ಶಾಪ್‌ಗೆ ಈಗ ತಾನೆ ಅವರು ನೋಟೀಸ್ ಕೊಟ್ಟಿದ್ದಾರೆ. ಆ ಒಂದು ಜಾಗದಲ್ಲಿದ್ದುದನ್ನು ಬೇರೆ ಜಾಗಕ್ಕೆ ಎಲ್ಲಿ ಕಾನೂನು ಪ್ರಕಾರ ಅಡ್ಡಿ ಇಲ್ಲವೋ ಅಲ್ಲಿಗೆ ವರ್ಗಾಯಿಸಲು ನೋಟೀಸ್ ಕೊಟ್ಟಿದ್ದು ಬೇಗನೆ ಆ ಕಾರ್ಯವನ್ನು ಮಾಡುತ್ತೇವೆ.

ಕರ್ನಾಟಕ ಸರ್ಕಾರ ಸಚಿವಾಲಯದ ಉಪಹಾರ ಮಂದಿರದ ನೌಕರರನ್ನು ಖಾಯಂ ಮಾಡುವ ಬಗ್ಗೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ: ಅಧ್ಯಕ್ಷರೇ ಗಮನ ಸೆಳೆಯುವ ಸೂಚನೆಗೆ ನಾನೂ ಸಹಿ ಮಾಡಿರುವುದರಿಂದ ಮೇಲ್ಕಂಡ ವಿಷಯದ ಬಗೆ ಸರ್ಕಾರದ ಗಮನ ಸೆಳೆಯುತ್ತೇನೆ.

* ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಕಾರ ಸಚಿವಾಲಯದ ನೌಕರರ ಉಪಯೋಗಕ್ಕಾಗಿ 1976ರಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯ ಇಲಾಖಾ ಉಪಹಾರ ಮಂದಿರವನ್ನು ಪ್ರಾರಂಭಿಸಲಾಯಿತು. ಈ ಉಪಹಾರ ಮಂದಿರದ ಆಡಳಿತದ ಹೊಣೆಯನ್ನು ಸಚಿವಾಲಯದ ಅಧಿಕಾರಿಗಳನ್ನೊಳಗೊಂಡ ಒಂದು ಆಡಳಿತ ಸಮಿತಿಗೆ ಒಪ್ಪಿಸಲಾಯಿತು. ಈ ಸಮಿತಿಯನ್ನು ಆಗಿಂದಾಗ್ಗೆ ಪುನರ್ ರಚಿಸಿಕೊಂಡು ಬರಲಾಗಿದೆ. ಈ ಇಲಾಖಾ ಉಪಹಾರ ಮಂದಿರದಲ್ಲಿ ಈಗ ಒಟ್ಟು 66 ಮಂದಿ ನೌಕರರಿದ್ದು, ಇವರನ್ನು ಈ ಇಲಾಖಾ ಉಪಹಾರ ಮಂದಿರದ ಸಮಿತಿಯವರು ನೇಮಿಸಿಕೊಂಡಿದ್ದಾರೆ. ಇವರು ಸರ್ಕಾರಿ ನೌಕರರಲ್ಲ. ಇವರ ವೇತನವನ್ನು ಕನಿಷ್ಠ ವೇತನ ಕಾಯ್ದೆಯನ್ನು ಗಮನದಲ್ಲಿಟ್ಟುಕೊಂಡು ನಿಗದಿಪಡಿಸಲಾಗಿದೆ. ಇವರಲ್ಲಿ ಹೆಚ್ಚಿಗೆ ಸಂಬಳ ಪಡೆಯುವ ನೌಕರರು ರೂ.1,500ಕ್ಕೂ ಮೇಲ್ಪಟ್ಟು ಸಂಬಳ ಪಡೆಯುತ್ತಿದ್ದಾರೆ. ಕಿರಿಯ ನೌಕರರು ರೂ.650ಕ್ಕೂ ಮೇಲ್ಪಟ್ಟು ಸಂಬಳ ಪಡೆಯುತ್ತಿದ್ದಾರೆ. ಈ ಸಂಬಳವಲ್ಲದೆ, ಇವರಿಗೆ ಸಮವಸ್ತ್ರ, ಹಬ್ಬದ ಮುಂಗಡ ಹಾಗೂ ಒಂದು ತಿಂಗಳ ಸಂಬಳವನ್ನು ಬೋನಸ್ ಆಗಿ ನೀಡಲಾಗುತ್ತಿದೆ. ಇದಲ್ಲದೆ, ಕೆಲಸದ ವೇಳೆಯಲ್ಲಿ ಊಟ ತಿಂಡಿಯನ್ನು ಉಚಿತವಾಗಿ ಕೊಡಲಾಗುತ್ತಿದೆ. ಹಾಗೂ ಫ್ಯಾಕ್ಟರಿ ಕಾಯ್ದೆಯನ್ವಯ ಅಂಶದಾಯಿ ಭವಿಷ್ಯನಿಧಿ ಸೌಲಭ್ಯವಿದೆ. ಈ ನೌಕರರಲ್ಲಿ 60 ನೌಕರರು 5 ವರ್ಷಗಳಿಂದ ಹಿಡಿದು 15 ವರ್ಷಗಳವರೆಗೆ ಸೇವೆಯನ್ನು ಸಲ್ಲಿಸಿದವರು ಇದ್ದಾರೆ. ಇವರು ಕಳೆದ ಹಲವಾರು ವರ್ಷಗಳಿಂದ ತಮ್ಮನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ, ಸರ್ಕಾರಿ ನೌಕರರ ವೇತನ ಶ್ರೇಣಿಯನ್ನು ಕೊಡಲು

ಒತ್ತಾಯಿಸುತ್ತಿದ್ದಾರೆ. ಈ ಬಗ್ಗೆ ವಿಧಾನ ಪರಿಷತ್ತಿನ ಆಶ್ವಾಸನಾ ಸಮಿತಿಯ ಮುಂದೆ ಆಶ್ವಾಸನೆ ಸಂಖ್ಯೆ 108 : 90 ಬಾಕಿ ಇದೆ. ಈ ವಿಷಯವು ಸರ್ಕಾರದ ಗಂಭೀರವಾದ ಪರಿಶೀಲನೆಯಲ್ಲಿದ್ದು , ಇದರಲ್ಲಿ ಕಾನೂನು ಹಾಗೂ ಆರ್ಥಿಕ ಸಮಸ್ಯೆಗಳಿದ್ದು ಇವುಗಳ ಸಮಗ್ರ ಪರಿಶೀಲನೆಯಾಗಬೇಕಾಗಿದೆ. ಹಾಗೂ ಇಂತಹದೇ ಬೇಡಿಕೆಗಳು ರಾಜ್ಯಮಟ್ಟದ ಹಾಗೂ ಜಿಲ್ಲಾಮಟ್ಟದ ಇಂತಹದೇ ಸಂಸ್ಥೆಗಳಿಂದ ಬರುವ ಸಾಧ್ಯತೆ ಇದ್ದು, ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಹಾಗೂ ಕಾನೂನಿನ ತೊಡಕುಗಳನ್ನು ಗಮನದಲ್ಲಿಟ್ಟುಕೊಂಡು ಒಂದು ತೀರ್ಮಾನ ಕೈಗೊಳ್ಳಬೇಕಾಗಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಅಧ್ಯಕ್ಷರೇ, 1990ರಲ್ಲಿ ಕೌನ್ಸಿಲ್‌ನೊಳಗೆ ಇವರನ್ನು ರೆಗ್ಯುಲರ್ ಮಾಡಲಾಗುವುದೆಂದು ಸರ್ಕಾರ ಆಶ್ವಾಸನೆ ಕೊಟ್ಟಿದೆ. ಈಗ 93 ಆದರೂ ಇವತ್ತಿನವರೆಗೂ ಇವರನ್ನು ರೆಗ್ಯುಲರ್ ಮಾಡಿಲ್ಲ. ನಾವು 15 ದಿವಸದಲ್ಲಿ ಎಲ್ಲ ಕಡತ ಮುಗಿಸಿ 100 ದಿವಸದಲ್ಲಿ ಎಲ್ಲಾ ಕಾರ್ಯಕ್ರಮ ಮುಗಿಸುತ್ತೇವೆ ಎಂದು ಹೇಳುತ್ತಾರೆ. ಆದರೆ, ಮೂರು ವರ್ಷವಾಗಿದ್ದರೂ ಇದನ್ನು ಮಾಡಿಲ್ಲ. ಇನ್ನೆಷ್ಟು ದಿವಸದಲ್ಲಿ ಇದನ್ನು ಮಾಡ್ತೀರಿ ಎಂದು ತಿಳಿಸಬೇಕು. ಅವರು 15 ವರ್ಷದಿಂದ ಕೆಲಸ ಮಾಡುತ್ತಿದ್ದಾರೆ. ಪಾಪ ದಿನಗೂಲಿ ಮೇಲೆ 600, 900 ರೂಪಾಯಿಗಳ ತನಕ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಅವರು ಖಾಯಂ ನೌಕರರು. ಅವರನ್ನು ಏಕೆ ರೆಗ್ಯುಲರ್ ಮಾಡುವುದಿಲ್ಲ. ಏನು ಕಾನೂನು ತೊಡಕಿದೆ? ಲಾ ಇಲಾಖೆ ಬೇಕು. ಅರ್ಥ ಇಲಾಖೆ ಬೇಕು ಅಂತ, ಏಕೆ? When they are working from the last 15 years, you must regularise them. ಆಗುವುದಿಲ್ಲ ಅಂದರೆ ಆಗೋದಿಲ್ಲ ಎಂದು ಹೇಳಿಬಿಡಿ. ಆದಕಾರಣ ಯಾವುದೇ ಪರಿಸ್ಥಿತಿಯಲ್ಲಿ ನಿರ್ದಿಷ್ಟವಾಗಿ ಇಷ್ಟು ದಿವಸದಲ್ಲಿ ಮಾಡುತ್ತೇವೆ ಎಂದು ಆಶ್ವಾಸನೆ ಕೊಡಬೇಕು ಮತ್ತು ಕೌನ್ಸಿಲ್‌ನಲ್ಲಿ ನೀವು ಭರವಸೆ ಕೊಟ್ಟಿದ್ದರೂ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಕೇಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಅಧ್ಯಕ್ಷರೇ , ನಾನು ಹೇಳುವುದೇನೆಂದರೆ ಇಂತಹ ಕ್ಯಾಂಟೀನ್ ಬಹಳ ಇವೆ, ಎಲ್ ಎಚ್ ನಲ್ಲಿ ಕ್ಯಾಂಟೀನಿದೆ, ಎಲ್ಲಾ ಸರ್ಕಾರಿ ಆಫೀಸ್‌ಗಳಲ್ಲೂ ಕ್ಯಾಂಟೀನಿದೆ. ಇವರೆಲ್ಲರನ್ನೂ ನಾವು ಸರ್ಕಾರಿ ನೌಕರರು ಮಾಡಬೇಕೆಂದು ಕೇಳುವುದು ಸರಿಯಲ್ಲ. ಏಕೆಂದರೆ ಅಲ್ಲೊಂದು ಕಮಿಟಿ ಇದೆ, ಅದು ಸರಿಯಾಗಿ ಸಂಬಳ ಕೊಡುತ್ತದೆಯೋ ಇಲ್ಲವೋ ಅವರಿಗೆ ಕನಿಷ್ಠ ಸೌಲಭ್ಯ ಕೊಡುತ್ತದೆಯೊ ಇಲ್ಲವೋ ಅದು ನೋಡಬೇಕು. ಏಕೆಂದರೆ ಅಲ್ಲಿ ಒಂದು ಕಮಿಟಿ ಇದೆ. ಆ ಕಮಿಟಿ ಸರಿಯಾಗಿ ಸಂಬಳವನ್ನು ಕೊಡುತ್ತದೆಯೋ ಇಲ್ಲವೋ, ಅವರಿಗೆ ಕನಿಷ್ಠ ವೇತನವನ್ನು ಕೊಡುತ್ತಾರೋ ಇಲ್ಲವೋ ಅವರಿಗೆ ಸವಲತ್ತುಗಳನ್ನು ಕೊಡುತ್ತಾರೋ ಇಲ್ಲವೋ ಎಂದು ನೋಡಬೇಕಾಗಿದೆ. ಹೈಕೋರ್ಟ್ ಎಲ್ಲಾ ಕೋರ್ಟ್‌ನಲ್ಲೂ ಒಂದೊಂದು ಕ್ಯಾಂಟೀನ್ ಇದೆ. ಇವರೆಲ್ಲರನ್ನೂ ಸರ್ಕಾರಿ ನೌಕರರೆಂದು ಮಾಡಿ ಎಂದು ಕೇಳುವುದು ಸರಿಯಲ್ಲ. ಆದರೆ ಇದನ್ನು ನಮ್ಮ ಸರ್ಕಾರದವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಶಿವಾನಂದ ಎಚ್. ಕೌಜಲಗಿ : ದೆಹಲಿಯಲ್ಲಿ ನಮ್ಮ ಕರ್ನಾಟಕ ಭವನದಲ್ಲಿ ಮಾಡುತ್ತೀರಿ. ಕರ್ನಾಟಕ ಭವನದಲ್ಲಿ ಮಾಡುವಂಥ ನೌಕರರನ್ನು ಅವರನ್ನು ಸರ್ಕಾರಿ ನೌಕರರು ಎಂದು ಟ್ರೀಟ್ ಮಾಡುತ್ತೀರಿ, ಆದರೆ ಜಿಲ್ಲೆಯಲ್ಲಿ ಪಾಪ 15 ವರ್ಷದಿಂದ ಕೆಲಸ

ಮಾಡುವವರನ್ನು ಅವರಿಗೆ ಸರ್ಕಾರಿ ನೌಕರರೆಂದು ನೀವು ಟ್ರೀಟ್ ಮಾಡುವುದಕ್ಕೆ ತಯಾರಿಲ್ಲ. ಏಕೆಂದರೆ, 15 ವರ್ಷದಿಂದ ಪುಕ್ಕಟೆ ಇಲ್ಲಿ ದುಡಿಯುತ್ತಿದ್ದಾರೆ. ದೆಹಲಿಯಲ್ಲಿ ಟೋಪಿ ಹಾಕಿಕೊಂಡು ಮಿನಿಸ್ಟರ್ ಮುಂದೆ ಓಡಾಡುತ್ತಾರೆ ಅವರನ್ನು ನೀವು ಪರ್ಮನೆಂಟ್ ಮಾಡುತ್ತೀರಿ? ಪಾಪ ಇವರನ್ನು ಏತಕ್ಕೆ ಸರ್ಕಾರಿ ನೌಕರರೆಂದು ಪರಿಗಣಿಸುವುದಿಲ್ಲ. They are also human beings. ಇವರನ್ನು ಸರ್ಕಾರಿ ನೌಕರರು ಎಂದು ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರೆ ಹೇಗೆ?

ಛೇರ್ಮನ್ : ಮಂತ್ರಿಗಳು ಉತ್ತರ ಕೊಟ್ಟಿರಲ್ಲ, ಆಯಿತು. ಈಗ 334ರ ಕಾರ್ಯಕ್ರಮ.

ನಿಯಮ : 334ರ ಮೇರೆಗೆ

ವಿಷಯ : ಮಲ್ಲೇಶ್ವರಂ ಕೆ. ಸಿ. ಜನರಲ್ ಆಸ್ಪತ್ರೆಯ ವಿಸ್ತರಣೆ .

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಪ್ರಸಿದ್ಧ ಮಲ್ಲೇಶ್ವರಂ ಕೆ. ಸಿ. ಜನರಲ್ ಆಸ್ಪತ್ರೆಯನ್ನು ಸುಮಾರು 70 ವರ್ಷಗಳ ಹಿಂದೆ ಕಟ್ಟಲಾಗಿದ್ದು ಈಗ ಇದನ್ನು ಮೆಡಿಕಲ್ ಆಸ್ಪತ್ರೆಯೆಂದು ಪರಿಗಣಿಸುವುದು ಜೊತೆಗೆ ಇಲ್ಲಿ ನರ್ಸಿಂಗ್ ಟ್ರೈನಿಂಗ್‌ಗೂ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇಲ್ಲಿಗೆ ಮಲ್ಲೇಶ್ವರಂ, ರಾಜಾಜಿನಗರ, ಯಶವಂತಪುರ, ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಸಾವಿರಾರು ರೋಗಿಗಳು ದಿನನಿತ್ಯ ಬರುತ್ತಿರುತ್ತಾರೆ. ಇದರಿಂದಾಗಿ ಒಳರೋಗಿಗಳಿಗೆ ಸ್ಥಳಾವಕಾಶವಿಲ್ಲದೆ ತುಂಬಾ ತೊಂದರೆಯಾಗಿರುತ್ತದೆ. ಈ ತೊಂದರೆಯನ್ನು ಆದಷ್ಟು ಬೇಗ ಹೋಗಲಾಡಿಸಲು ಹೊಸ ಕಟ್ಟಡಗಳನ್ನು ಕಟ್ಟಿಸಿ ಹಾಸಿಗೆಗಳ ವ್ಯವಸ್ಥೆ ಮಾಡುವುದರ ಜೊತೆಗೆ ಹೊರ ರೋಗಿಗಳಿಗೋಸ್ಕರ ಐ.ಪಿ.ಪಿ.ಯವರ ಅಧೀನದಲ್ಲಿರತಕ್ಕಂಥ ಕಟ್ಟಡವನ್ನೂ ಕೂಡ ಕೆ. ಸಿ. ಜನರಲ್ ಆಸ್ಪತ್ರೆಯ ಅಧೀನಕ್ಕೊಳಪಡಿಸುವುದರ ಮೂಲಕ ಇಲ್ಲಿಗೆ ದಿನನಿತ್ಯ ಬರತಕ್ಕ ಹೊರ ರೋಗಿಗಳಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ಈ ಮೂಲಕ ಮಾನ್ಯ ಆರೋಗ್ಯ ಖಾತೆ ಸಚಿವರನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :(ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಕೆ. ಸಿ. ಜನರಲ್ ಆಸ್ಪತ್ರೆಯಲ್ಲಿ ದಿನನಿತ್ಯ ಬರುತ್ತಿರುವ ಹೊರ ರೋಗಿಗಳ ಮತ್ತು ಒಳರೋಗಿಗಳ ಸಂಖ್ಯೆ ಹೆಚ್ಚುತ್ತಿದ್ದು, ಈ ಎರಡು ವಿಭಾಗದದಲ್ಲಿ ಸ್ಥಳಾವಕಾಶದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇಲ್ಲಿಗೆ ದಿನನಿತ್ಯ 1000 ದಿಂದ 1500 ಜನ ಹೊರ ರೋಗಿಗಳು ಹಾಗೂ 80 ರಿಂದ 90 ಜನ ಒಳರೋಗಿಗಳು ದಾಖಲಾಗುತ್ತಿದ್ದಾರೆ. ಈ ಹೆಚ್ಚುತ್ತಿರುವ ಚಿಕಿತ್ಸೆಯ ಬೇಡಿಕೆಯಿಂದಾಗಿ, 1988ರಲ್ಲಿ ಈ ಆಸ್ಪತ್ರೆಯ ಹಾಸಿಗೆಯ ಸಂಖ್ಯೆಯನ್ನು 313ರಿಂದ 453ಕ್ಕೆ ಹೆಚ್ಚಿಸಲಾಯಿತು. ಈಗ ಹಾಲಿ ಇರುವ ಭಾರತೀಯ ಜನಸಂಖ್ಯಾ ಕೇಂದ್ರದ ಕಟ್ಟಡವು ಐಪಿಪಿ -1 ಯೋಜನೆಯಲ್ಲಿ ವಿಶ್ವಬ್ಯಾಂಕಿನ ಹಣಕಾಸಿನ ನೆರವಿನಿಂದ ಕಟ್ಟಿದ್ದು. ಈ ಕಟ್ಟಡವನ್ನು ಬೇರೆ ಉದ್ದೇಶಕ್ಕೆ ವರ್ಗಾಯಿಸಲು ಹಾಗೂ ಇಲ್ಲೇ ಹೊರ ರೋಗಿ ವಿಭಾಗವನ್ನು ತೆರೆಯಲು ಸಾಧ್ಯವಾಗುವುದಿಲ್ಲ.